ಛೇರ್ಮನ್:- ಪ್ರಸ್ತಾವ ಏನೆಂದರೆ : " 1992 ನೇ ಕನ್ನಡ ವಿಶ್ವವಿದ್ಯಾನಿಲಯ(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ಮತ್ತು 3

ಛೇರ್ಮನ್:- "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ಮತ್ತು 3 ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1ಇತ್ಯಾದಿ:

ಛೇರ್ಮನ್:- ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕ ಭಾಗವಾಗಿರುತ್ತದೆ."

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ.ವೀರಪ್ಪ ಮೊಯಿಲಿ: (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, " 1992ರ ಕನ್ನಡ ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಛೇರ್ಮನ್:- ಪ್ರಸ್ತಾವ ಏನೆಂದರೆ " 1992 ಕನ್ನಡ ವಿಶ್ವವಿದ್ಯಾನಿಲಯ(ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(2) ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾ ನಿಲಯ ವಿಧೇಯಕ, 1992

ಪರ್ಯಾಲೋಚನಾ ಪ್ರಸ್ತಾವ :

ಶ್ರೀ ಎಂ.ವೀರಪ್ಪ ಮೊಯಿಲಿ :(ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, " 1992ರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

(ಪ್ರಸ್ತಾವ ಮಂಡಿಸಲಾಯಿತು)

ಶ್ರೀ ಎಂ.ವೀರಪ್ಪ ಮೊಯಿಲಿ :(ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, ಈವೊಂದು ಶಿಕ್ಷಣ ವ್ಯವಸ್ಥೆಯಲ್ಲಿ ಅದರಲ್ಲೂ ಕೂಡ ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ಇದು ಒಂದು ಹೊಸ ಯುಗವನ್ನು ಕರ್ನಾಟಕ ರಾಜ್ಯದಲ್ಲಿ ಪ್ರಾರಂಭಮಾಡುತ್ತಿದ್ದೇವೆ. ಏಕೆಂದರೆ, ತಮಗೆ ಗೊತ್ತಿರುವ ಹಾಗೆ ಈಗ ಉನ್ನತ ಶಿಕ್ಷಣ ಕೆಲವೇ ಜನರಿಗೆ ದಕ್ಕತಕ್ಕದ್ದಾಗಿದೆ. ತಮಗೆ ಆಶ್ಚರ್ಯವಾಗಬಹುದು, ಅದರ ಬಗ್ಗೆ ಸ್ವಲ್ಪ ವಿವರಣೆ ಕೊಡುತ್ತೇನೆ. ಅಂಕಿಸಂಖ್ಯೆಯನ್ನು ನೋಡಿದರೂ ಕೂಡ ಒಟ್ಟು ನಮ್ಮ ನಮ್ಮ ಪ್ರಾಮಾಣಿಕ ಪ್ರಯತ್ನ ಮಾಡಿದರೂ ಕೂಡ 100 ಮಕ್ಕಳು ಒಂದನೆಯ ತರಗತಿಗೆ ಸೇರುವುದಕ್ಕೆ ಅರ್ಹತೆ ಇದ್ದರೂ ಆ ವಯಸ್ಸಿನಲ್ಲಿ ಕೇವಲ 34 ಪರ್ಸೆಂಟ್ ಮಾತ್ರ ಪ್ರಥಮ ತರಗತಿಗೆ ಸೇರುತ್ತಾರೆ. ಈ ದುರ್ವ್ಯವಸ್ಥೆ ನಮ್ಮ ರಾಷ್ಟ್ರದಲ್ಲಿದೆ. ಈಗಲೂ ಕೂಡ ಎರಡನೆಯ ತರಗತಿಗೆ ಬರುವಾಗ 34 ಪರ್ಸೆಂಟ್ ಇದ್ದದ್ದು 27

ಪರ್ಸೆಂಟ್‌ಗೆ ಬರುತ್ತದೆ. ನೂರು ಮಕ್ಕಳಲ್ಲಿ ಎರಡನೆಯ ತರಗತಿಗೆ ಸೇರುವವರು ಕೇವಲ 2ಪರ್ಸೆಂಟ್. ಅವರು ಮೂರನೆಯ ತರಗತಿಗೆ ಬಂದಾಗ ಅದು 24 ಪರ್ಸೆಂಟ್ ಆಗುತ್ತದೆ. ಅಂದರೆ 3ನೆಯ ತರಗತಿಗೆ ಸೇರಬೇಕಾದ ಆ ವಯಸ್ಸಿನ ಮಕ್ಕಳು 24 ಪರ್ಸೆಂಟ್ ಮಾತ್ರ ಸೇರುತ್ತಾರೆ. ಅದು ನಾಲ್ಕನೆಯ ತರಗತಿಗೆ ಬಂದಾಗ 24 ಇದ್ದದ್ದು 18 ಪರ್ಸೆಂಟ್ ಆಗುತ್ತದೆ. ಕೇವಲ 17-18 ಪರ್ಸೆಂಟ್ ಮಾತ್ರ ಶಾಲೆಗೆ ಹೋಗತಕ್ಕ ಪರಿಸ್ಥಿತಿಯನ್ನು ನೋಡಿದರೆ ಉನ್ನತ ಶಿಕ್ಷಣ ಎಷ್ಟು, ಜನರಿಗೆ ಸಿಗುತ್ತದೆ ಎನ್ನುವುದನ್ನು ತಾವು ಯೋಚನೆ ಮಾಡಬೇಕು. 44 ಪರ್ಸೆಂಟ್ ಮಾತ್ರ ಉನ್ನತ ಶಿಕ್ಷಣವನ್ನು ಪಡೆಯುತ್ತಾರೆ. ಒಂದನೆಯ ತರಗತಿಗೆ ಸೇರಿದಂತಹ ಒಟ್ಟು ಪ್ರಮಾಣದ ಸಾಧಾರಣ 5 ಪರ್ಸೆಂಟ್ ಜನ ಕೂಡ ಉನ್ನತ ಶಿಕ್ಷಣಕ್ಕೆ ಹೋಗುವುದಿಲ್ಲ. ಈ ಪರಿಸ್ಥಿತಿ ಇರುವಾಗ ಬೇರೆ ಒಂದು ಉನ್ನತ ಶಿಕ್ಷಣ ಎಲ್ಲರ ಪಾಲಿಗೆ ಸಂಭವವಾಗಿ ದಕ್ಕಬೇಕಾಗುತ್ತದೆ. ಈಗ ಒಂದು ಸಾಪ್ಟಿಕ ಉನ್ನತ ಶಿಕ್ಷಣ ಇದೆ. ಇದು ಇರಬಹುದು ಅಥವಾ ಸಾಂಸ್ಥಿಕವಾಗಿರತಕ್ಕಂಥ ಪ್ರಾಥಮಿಕ ಶಿಕ್ಷಣ ಇರಬಹುದು, ಪ್ರೌಢ ಶಿಕ್ಷಣ ಇರಬಹುದು. ಈ ಎಲ್ಲ ಜನರನ್ನು ಮುಟ್ಟತಕ್ಕಂಥ ಒಂದು ವ್ಯವಸ್ಥೆ ಇವತ್ತು ಕೂಡ ಆಗಿರುವುದಿಲ್ಲ. 1901 ರಲ್ಲಿ ಈ ಶತಮಾನ ಪ್ರಾರಂಭವಾದಾಗ ಅಕ್ಷರಸ್ಥರು ಎಷ್ಟು ಇದ್ದರು ಎಂದರೆ 3.67 ಪರ್ಸೆಂಟ್ ಇದ್ದರು. 1947 ನೇ ಇಸವಿಯಲ್ಲಿ ಸ್ವಾತಂತ್ರ್ಯ ಸಿಕ್ಕಿದಾಗ ಅಕ್ಷರಸ್ಥರ ಸಂಖ್ಯೆ 3.67 ನಿಂದ ಬರೇ 16 ಪರ್ಸೆಂಟ್‌ನಷ್ಟು ಮೇಲೆ ಬಂದಿದೆ ಅಂದರೆ ಬರೇ ಹನ್ನೆರಡೂವರೆ ಪರ್ಸೆಂಟ್ ಮಾತ್ರ. ಇದು ಸುಮಾರು ಅರ್ಧ ಶತಮಾನದಲ್ಲಿ ಸಾಧನೆ ಮಾಡುವುದಕ್ಕೆ ಸಾಧ್ಯವಾಯಿತು. ಈಗ ರಾಷ್ಟ್ರ ಮಟ್ಟದಲ್ಲಿ 52 ಪರ್ಸೆಂಟ್ ಆಗಿದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ 57 ಪರ್ಸೆಂಟ್ ಆಗಿದೆ. ಅಂದರೆ ಸಾಕ್ಷರತೆ ಬರೇ ಅದು ಒಂದನೇ ತರಗತೀನೂ ಅಲ್ಲ. ಸಾಕ್ಷರತೆ ಕೂಡ ಜನರಿಗೆ ಮುಟ್ಟುವುದಕ್ಕೆ ಅಸಾಧ್ಯವೆನ್ನತಕ್ಕಂಥ ಸಂದರ್ಭದಲ್ಲಿ ಸಾಕ್ಷರತಾ ಮಿಶನ್ ಎಂದು 1986 ರಲ್ಲಿ ನಮ್ಮ ಹಿಂದಿನ ಪ್ರಧಾನಿಗಳಾದ ಶ್ರೀ ರಾಜೀವ್‌ಗಾಂಧಿಯವರು ಪ್ರಾರಂಭ ಮಾಡಿದರು. ಈಗ ಸಾಕ್ಷರತಾ ಆಂದೋಳನ ಬೇರೆ ಬೇರೆ ಕಡೆಯಲ್ಲಿ ನಡೆಯುತ್ತಿದೆ. ಆದ್ದರಿಂದ ಈ ಸಾಂಸ್ಥಿಕವಾದಂಥ ಏರ್ಪಾಡು ಇವತ್ತು ಕೂಡ ಜನರಿಗೆ ಮುಟ್ಟುವುದಕ್ಕೆ ಸಾಧ್ಯವಿರುವ ಸಂಗರ್ಭದಲ್ಲಿ ಎಲ್ಲ ಮಟ್ಟದ ಶಿಕ್ಷಣ, ಉನ್ನತ ಶಿಕ್ಷಣ ಸೇರಿ ಜನತೆಗೆ ಮುಟ್ಟತಕ್ಕಂಥ ಒಂದು ವ್ಯವಸ್ಥೆ, ವ್ಯಾಪಕವಾಗಿ ಇಡೀ ರಾಷ್ಟ್ರದಲ್ಲಿ ಆಗಬೇಕು. ಈಗ ರಾಷ್ಟ್ರಮಟ್ಟಕ್ಕೆ ಒಂದು ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾನಿಲಯ ಎಂದು ಆಗಿದೆ. ಆದರೆ ತಮಗೆ ಗೊತ್ತಿದೆ, ಅದು ನಿಜವಾಗಿ ನಮ್ಮ ರಾಜ್ಯಭಾಷೆಯಲ್ಲಿ, ನಮ್ಮ ಮಾತೃಭಾಷೆಯಲ್ಲಿ, ಇವತ್ತು ಉನ್ನತ ಶಿಕ್ಷಣ ಎಲ್ಲರ ಪಾಲಿಗೆ, ಈ ಸಮಾಜದಲ್ಲಿರತಕ್ಕಂಥ ಎಲ್ಲ ವರ್ಗದ ಜನರ ಪಾಲಿಗೆ ದೊರಕಬೇಕಾದರೆ ಮುಕ್ತವಿಶ್ವವಿದ್ಯಾನಿಲಯ ರಾಜ್ಯಮಟ್ಟದಲ್ಲಿ ಇದ್ದಾಗ ಮಾತ್ರ ಪರಿಮೂರ್ಣವಾಗಿ ದೊರಕುವುದಕ್ಕೆ ಸಾಧ್ಯವಿದೆ. ನಮ್ಮ ಮಾತೃಭಾಷೆಯಲ್ಲಿ, ನಮ್ಮ ರಾಜ್ಯಭಾಷೆಯಲ್ಲಿ ಇದನ್ನು ಶುರುಮಾಡಿದಾಗ ಮಾತ್ರ, ಎಲ್ಲ ರೀತಿಯ ಉನ್ನತ ಶಿಕ್ಷಣ ಕ್ಷೇತ್ರಗಳಲ್ಲಿ ಜನರಿಗೆ ಪರಿಚಯ ಮಾಡಿಕೊಡುವುದಕ್ಕೆ ಸಾಧ್ಯವಾಗುತ್ತದೆ, ಇಲ್ಲದಿದ್ದರೆ, ಆಗುವುದಿಲ್ಲ. ಈಗಾಗಲೇ ಆಂಧ್ರಪ್ರದೇಶದವರು ಮುಕ್ತ ವಿಶ್ವವಿದ್ಯಾನಿಲಯ ಮಾಡಿದ್ದಾರೆ. ಆದರೆ ಕರ್ನಾಟಕ ರಾಜ್ಯ ಇಷ್ಟರವರೆಗೆ ಪ್ರಾರಂಭ ಮಾಡಬೇಕಿತ್ತು. ಈಗ ನಾವು ರಾಷ್ಟ್ರಮಟ್ಟದ ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾನಿಲಯ, ಆಂಧ್ರಪ್ರದೇಶದ ಮುಕ್ತ ವಿಶ್ವವಿದ್ಯಾನಿಲಯ ಮತ್ತು ರಾಷ್ಟ್ರದಲ್ಲಿರತಕ್ಕಂಥ ಬೇರೆ ಬೇರೆ ಮುಕ್ತ ವಿಶ್ವವಿದ್ಯಾನಿಲಯಗಳು, ಅದರ ಸಾಧಕ ಬಾಧಕ ಮತ್ತು ಅಲ್ಲಿರತಕ್ಕಂಥ ಕೊರತೆ, ಎಲ್ಲವನ್ನೂ ಪರಿಷ್ಕರಣ ಮಾಡಿ, ಪರಿಶೀಲನೆ ಮಾಡಿ ಅದಕ್ಕಿಂತಲೂ ಉತ್ತಮವಾದ ಒಂದು ಮಸೂದೆಯನ್ನು ಸಾಕಷ್ಟು ಅಭ್ಯಾಸ ಮಾಡಿ, ಸಾಕಷ್ಟು ಈ ಬಗ್ಗೆ ಕಾರ್ಯಾಗಾರಗಳನ್ನು ನಡೆಸಿ, ವಿದ್ವಾಂಸರ ಹತ್ತಿರ, ಜನರ ಹತ್ತಿರ ಎಲ್ಲಾ ಮಟ್ಟದಲ್ಲಿ ಕೂಡ ಚರ್ಚೆಮಾಡಿ ಇದನ್ನು ತಂದಿದ್ದೇವೆ. ಇದನು ಏನು ಬಹಳ ಅವಸರದಿಂದ ಮಾಡಿಲ್ಲ. ಕಳೆದ ಬಜೆಟ್‌ನಲ್ಲಿ, ಆಯವ್ಯಯದಲ್ಲಿ ಇದರ ಬಗ್ಗೆ ಘೋಷಣೆ ಆಗಿತ್ತು. ನಾವು ಒಂದು ವರ್ಷ ಮತ್ತು ಅದಕ್ಕಿಂತಲೂ ಹಿಂದೆ ಸನ್ಮಾನ್ಯ ಡಿ.ವಿ. ಅರಸು ಅವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಕೂಡ ಮಾಡಿದ್ದೆವು. ಈ ಸಮಿತಿಯು ಇದರ ಬಗ್ಗೆ ಅಧ್ಯಯನ ಮಾಡಿ, ಎಲ್ಲ ಬೇರೆ ಬೇರೆ ಸಂಸ್ಥೆಗಳನ್ನು ಅಧ್ಯಯನ

ಮಾಡಿ, ಏನು ರಾಜ್ಯದ, ಜನತೆಯ, ನಾನಾಭಾಗದ, ನಾನಾ ವರ್ಗದ ಜನರ ಅನಿಸಿಕೆಗಳು ಇವೆ, ಆಶಯಗಳಿವೆ, ವ್ಯವಸ್ಥೆಯ ಬೇಡಿಕೆಗಳಿವೆ, ಅದಕ್ಕೆಲ್ಲ ಅವರು ಸ್ಪಂದಿಸಿ, ಮೈಸೂರು ವಿಶ್ವ ವಿದ್ಯಾನಿಲಯದ ಮಾಜಿ ಕುಲಪತಿಗಳಾದ ಸನ್ಮಾನ್ಯ ಡಿ.ವಿ. ಅರಸು ಅವರು ವರದಿಯನ್ನು ಕೊಟ್ಟಮೇಲೆ, ಅದರ ಆಧಾರದ ಮೇಲೆ ಪುನಃ ಕಾರ್ಯಾಗಾರಗಳನ್ನು ಬೇರೆ ಬೇರೆ ಕಡೆಗಳಲ್ಲಿ ಏರ್ಪಾಡು ಮಾಡಿ, ಬೆಂಗಳೂರು, ಮೈಸೂರುಗಳಲ್ಲಿ ಕರೆಸ್ಪಾಂಡೆನ್ಸ್ ಕೋರ್ಸ್ ಎಂದು ಇದೆ. ಅದನ್ನೂ ಕೂಡ ಇದಕ್ಕೆ ಒಳಪಡಿಸತಕ್ಕಂಥ ವ್ಯವಸ್ಥೆಯನ್ನು ಮಾಡಿ ಇದು ಒಂದು ಹೊಸ ಆಯಾಮ, ಉನ್ನತ ಶಿಕ್ಷಣದಲ್ಲಿ ಬರಬೇಕೆಂದು, ಬಹಳ ಮಹಾತ್ವಾಕಾಂಕ್ಷೆಯಿಂದ ಈ ಮುಕ್ತ ವಿಶ್ವವಿದ್ಯಾನಿಲಯದ ಯೋಚನೆ ಮಾಡಿದ್ದೇವೆ ಮತ್ತು ಈ ಮಸೂದೆಯನ್ನು ತಂದಿದ್ದೇವೆ. ಇದಕ್ಕೆ ತಾವೆಲ್ಲ ಬೆಂಬಲ ಕೊಟ್ಟು, ಮಂಜೂರು ಮಾಡಿಕೊಟ್ಟರೆ ನಾವು ಬರುವ ಆಕಾಡೆಮಿಕ್ ವರ್ಷದಿಂದ ಕಾರ್ಯಾರಂಭ ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂಬ ಇರಾದೆಯಿಂದ ಇದನ್ನು ತಂದಿದ್ದೇವೆ. ಸರ್ವರೀತಿಯಲ್ಲಿ ಇದಕ್ಕೆ ಬೆಂಬಲವನ್ನು ಸಲಹೆಯನ್ನು ಕೊಡಬೇಕೆಂದು ಕೂಡ ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ.

+ ಶ್ರೀ ಬಿ.ಎಸ್.ಯಡಿಯೂರಪ್ಪ:(ಶಿಕಾರಿಪುರ):- ಸನ್ಮಾನ್ಯ ಅಧ್ಯಕ್ಷರೇ, ಈ ಕನ್ನಡ ಮುಕ್ತ ವಿಶ್ವವಿದ್ಯಾನಿಲಯದ ವಿಚಾರ ಸ್ವಾಗತ ಮಾಡುವಂಥಾದ್ದು. ಆದರೆ, ಒಂದು ಸಲಹೆಯನ್ನು ಕೊಡುವಂಥಾದ್ದು ಏನೆಂದರೆ, ಈ ರೀತೀಯಾಗಿ ಹೊಸ ರೀತಿಯಲ್ಲಿ ಮುಕ್ತ ವಿಶ್ವವಿದ್ಯಾನಿಲಯವನ್ನು ಮಾಡಬೇಕೆಂಬ ಯೋಚನೆ ಮಾಡುವಂಥ ಕಾಲದಲ್ಲಿ, ಒಳ್ಳೆಯ ರೀತಿಯಲ್ಲಿ ಪರಿಣಾಮಕಾರಿಯಾಗಿ, ಕಾರ್ಯರೂಪಕ್ಕೆ ತರುವ ದೃಷ್ಟಿಯಿಂದ, ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿಕೊಡಬೇಕು. ಇದರಿಂದ, ಇದರ ಬಗ್ಗೆ ಇನ್ನೂ ವಿಶೇಷವಾದ ಸಲಹೆಗಳನ್ನು ಕೊಡುವುದಕ್ಕೆ, ಮುಕ್ತವಾಗಿ ಚರ್ಚೆ ಮಾಡುವುದಕ್ಕೆ ಮತ್ತೆ ಪರಿಣಾಮಕಾರಿಯಾಗಿ ತರುವುದಕ್ಕೆ ಅನುಕೂಲವಾಗುತ್ತದೆ. ಅದಕ್ಕೋಸ್ಕರ,ಈಗಾಗಲೇ ಜಂಟಿ ಸಲಹಾ ಸಮಿತಿಗೆ ರೆಫರ್ ಮಾಡಬೇಕೆಂದು ಚರ್ಚೆಯಾಗಿದೆ, ಬಹುಶಃ ಒಮ್ಮತದ ಅಭಿಪ್ರಾಯಕ್ಕೆ ಈ ಕಡೆಯವರು ಬಂದಿದ್ದಾರೆ. ಈ ವಿಚಾರದಲ್ಲಿ ತಾವು ಒಂದು ತೀರ್ಮಾನ ತೆಗೆದುಕೊಂಡರೆ ಒಳ್ಳೆಯದು ಎಂಬ ಸಲಹೆಯನ್ನು ಕೊಡುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್:(ಚಾಮರಾಜನಗರ):- ಮಾನ್ಯ ಅಧ್ಯಕ್ಷರೇ, ಈ ಮಸೂದೆ ಬಹಳ ಕ್ರಾಂತಿಕಾರಕವಾದ ಮಸೂದೆ. ಮುಕ್ತ ವಿಶ್ವವಿದ್ಯಾನಿಲಯವನ್ನು ತರತಕ್ಕಂಥ ಬಗ್ಗೆ ಕುಳಿತು ಚರ್ಚಿಸಿ, ಇನ್ನೂ ಅನೇಕ ವಿಚಾರಗಳ ಚಿಂತನ ಮಂಥನ ನಡೆಸಬೇಕಾಗಿದೆ. ಆದ್ದರಿಂದ, ಇದನ್ನು ಜಂಟಿ ಸಲಹಾ ಸಮಿತಿಗೆ ಶಿಫಾರಸ್ ಮಾಡಿ ಕಳುಹಿಸಿಕೊಡುವುದಾದರೆ,ಇದರ ಬಗ್ಗೆ ಇನ್ನೂ ಅನೇಕ ವಿಧದಲ್ಲಿ ಬೆಳಕು ಚೆಲ್ಲುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಈ ಬಗ್ಗೆ ತಾವು ತರಾತುರಿಯಿಂದ ವಿಧೇಯಕವನ್ನು ಏನು ತರಬೇಕೆಂದು ಇದ್ದೀರಿ, ಇದರ ಬಗ್ಗೆ ತರಾತುರಿ ಆತುರಪಡುವ ಬದಲು ಜಂಟಿ ಸಲಹಾ ಸಮಿತಿಗೆ ಕಳುಹಿಸಿದರೆ ಒಳ್ಳೆಯದಾಗುತ್ತದೆ. ನಿಮ್ಮ ಉದ್ದೇಶವೇನೋ ಒಳ್ಳೆಯದಿದೆ. ತಾವು ಮುಕ್ತ ವಿಶ್ವವಿದ್ಯಾನಿಲಯ ಮಾಡುವಾಗ, ಎಲ್ಲಾ ಆಯಾಮಗಳನ್ನೊ ಚಿಂತಿಸಿ, ಇನ್ನೂ ಅನೇಕ ಉತ್ತಮವಾದ ಸಲಹೆಗಳನ್ನು ತೆಗೆದುಕೊಂಡು, ಮಾಡಬೇಕು. ಇದು ನಿಜವಾಗಿಯೂ ಬಹಳ ಒಳ್ಳೆಯ ಮಸೂದೆ, ನಾನು ಸ್ವಾಗತ ಮಾಡುತ್ತೇನೆ. ನಿಮ್ಮ ದಿಟ್ಟ ನಿಲುವಿಗೆ ಅಭಿನಂದಿಸುತ್ತೇನೆ. ಸರ್ಕಾರ ಮತ್ತು ತಾವು ತೆಗೆದುಕೊಂಡಿರತಕ್ಕ ಈ ನಿಲುವಿಗೆ, ಅಭಿನಂದಿಸುತ್ತೇನೆ. ಇದರಲ್ಲಿ ಇನ್ನೂ ಅನೇಕ ಉತ್ತಮವಾದ ಸಲಹೆಗಳನ್ನು ತೆಗೆದುಕೊಂಡು ಮಾತನಾಡಬೇಕಾಗಿದೆ. ಅದಕ್ಕೋಸ್ಕರವಾಗಿ ಆತುರಾತುರವಾಗಿ ತರುವ ಬದಲು, ಇನ್ನೂ ಬೇಕಾದಷ್ಟು ಅವಕಾಶ ಇದೆ. ತಾವು ಇದನ್ನು ಜಂಟಿ ಸಲಹಾ ಸಮಿತಿಗೆ ಕಳುಹಿಸಿಕೊಡಿ. ಆ ಸಮಿತಿಗೆ ಸದಸ್ಯರನ್ನು ಯಾರನ್ನು ಬೇಕಾದರೂ ಹಾಕಿ, ಇದರ ಬಗ್ಗೆ ಸ್ವಲ್ಪ ಚಿಂತನೆ ನಡೆಸೋಣ. ಇನ್ನೂ ಅನೇಕ ವಿಚಾರಗಳನ್ನು ಇದರಲ್ಲಿ ತರಬೇಕಾಗಿದೆ ಮತ್ತು ಅದರಲ್ಲಿ ಅನೇಕ ಸಮಸ್ಯೆಗಳು, ಎಡರು ತೊಡರುಗಳು ಇವೆ. ಇವು ಪರಿಹಾರವಾಗಬೇಕಾದರೆ, ಪ್ರಮಾಣಿಕ ಚಿಂತನೆಯನ್ನು ನಡೆಸೋಣ. ನಿಮ್ಮ ಈ ಒಳ್ಳೆಯ ಉದ್ದೇಶಕ್ಕೆ ಅನೇಕ ಸಲಹೆಗಳನ್ನು ಕೊಡಬೇಕೆಂದಿದ್ದೇವೆ. ಆದ್ದರಿಂದ ಇದನ್ನು ಸಲಹಾ ಸಮಿತಿಗೆ ಒಪ್ಪಿರತಕ್ಕಂಥಾದ್ದು

ಒಳ್ಳೆಯದೆಂದು ಹೇಳುತ್ತೇನೆ.

ಶ್ರಿ ಸಿ.ಬೈರೇಗೌಡ:- ಮಾನ್ಯ ಅಧ್ಯಕ್ಷರೇ, ಈ ಸರ್ಕಾರ ಉತ್ತಮವಾದ ಕೆಲಸ ಮಾಡುವುದಕ್ಕೆ ಹೊರಟಿದೆ. ಏಕೆಂದರೆ ಇವತ್ತು ವಿಧ್ಯಾಭ್ಯಾಸದಲ್ಲಿ ಅದರಲ್ಲೂ ಹೈಯರ್ ಎಜುಕೇಷನ್ ಸರ್ಕಾರ ನಡೆಸಬಹುದೇ, ನಡೆಸುವುದರಿಂದ ಅದು ಯಾವ ರೀತಿ ಇರಬೇಕೆನ್ನುವಂಥಾದ್ದು ಬಹಳ ಮುಖ್ಯ. ಇವತ್ತಿನದಿವಸ ಅನೇಕರು ವಿದ್ಯೆ ಕಲಿಯಬೇಕೆಂಬ ಆಸೆ ಇರತಕ್ಕಂಥಾವರು ಕೂಡ ಆರ್ಥಿಕವಾಗಿ ಅಷ್ಟು ಸಬಲರಾಗಿ ಕಾರಣದಿಂದ ವಿದ್ಯೆ ನಿಲ್ಲಿಸಿ ಒಂದು ಕಡೆ ಕೆಲಸ ಮಾಡಬೇಕಾಗುತ್ತದೆ. ಒಂದು ಕಡೆ ವೃತ್ತಿಯಲ್ಲಿ ತೊಡಗಿರಬೇಕಾಗುತ್ತದೆ, ಅದರ ಜೊತೆಗೆ ಮತ್ತೊಂದು ಕಡೆ ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕಾಗುತ್ತದೆ. ಈ ಪರಿಸ್ಥಿತಿ ಇದೆ. ಇವತ್ತು ಪ್ರಾಥಮಿಕ ಹಂತದಲ್ಲಿಯೂ ಕೂಡ ವಿಧ್ಯಾಭ್ಯಾಸ ಬಹಳ ಅಧೋಗತಿಯಲ್ಲಿದೆ. ಸರ್ಕಾರಿ ಶಾಲೆಗಳಲ್ಲಿ ರತಕ್ಕ ಪರಿಸ್ಥಿತಿಯನ್ನು ನಾವು ಗಮನಿಸಿದಾಗ, ಅವು ಬಹಳ ಶೋಚನೀಯ ಪರಿಸ್ಥಿತಿಯಲ್ಲಿವೆ. ಆದ್ದರಿಂದ ಇವತ್ತಿನದಿವಸ ಏನು ಒಳ್ಳೆಯ ಕೆಲಸ ಮಾಡುವುದಕ್ಕೆ ಹೊರಟಿದ್ದೀರಿ, ಅದರಲ್ಲಿಯೂ ಕೂಡ ಈ ಮಸೂದೆಯಿಂದ ಗ್ರಾಮಾಂತರ ಪ್ರದೇಶದಲ್ಲಿ ರತಕ್ಕ ವಿದ್ಯಾರ್ಥಿಗಳೂ ಮುಂದೆ ಬರುತ್ತಾರೆ ; ಅವರಿಗೆ ಹೆಚ್ಚಿನ ಅವಕಾಶವಾಗುತ್ತದೆ. ಅವರು ವ್ಯವಸಾಯ ಮಾಡಿಕೊಂಡು, ಮತ್ತೊಂದು ಕೆಲಸದಲ್ಲಿದ್ದಾಗ, ತಮ್ಮ ವೃತ್ತಿಯಲ್ಲಿದ್ದುಕೊಂಡು, ಈ ವಿದ್ಯಾಭ್ಯಾಸವನ್ನು ಜ್ಞಾನಾರ್ಜನೆಯನ್ನು ಹೆಚ್ಚಿಗೆ ಪಡೆಯುವುದಕ್ಕೆ ಅವಕಾಶವಾಗುತ್ತದೆ. ನನ್ನ ದೃಷ್ಟಿಯಿಂದ ಇದು ಒಳ್ಳೆಯ ಮಸೂದೆ, ಒಳ್ಳೆಯ ಕೆಲಸ ಮಾಡುವುದಕ್ಕೆ ಹೊರಟಿದ್ದೀರಿ. ಇದನ್ನು ನಾನಂತೂ ಸ್ವಾಗತಿಸುತ್ತೇನೆ. ಈ ಪ್ರಯೋಗ ನಮ್ಮ ರಾಜ್ಯದಲ್ಲಿ ಪ್ರಥಮವಾಗಿ ಆಗುತ್ತಿದೆ. ಬೇರೆ ರಾಜ್ಯಗಳಲ್ಲಿ ಅದರಲ್ಲಿಯೂ ಕೂಡ, ಡೆಲ್ಲಿಯಲ್ಲಿ ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾನಿಲಯ ಇದೆ, ಅದೇರೀತಿ ಬೇರೆ ಕಡೆ ಕೂಡ ಇವೆ. ಈ ರೀತೀಯಾಗಿ ನಮ್ಮ ರಾಜ್ಯದಲ್ಲೂ ಮಾಡುವುದು ಸ್ವಾಗತಾರ್ಹ. ಇದನ್ನು ಮಾಡುವಾಗ, ಈಗಾಗಲೇ ಬೇರೆ ಕಡೆ ಇಂತಹ ವಿಶ್ವವಿದ್ಯಾನಿಲಯಗಳು ಯಾವ ರೀತಿ ಕೆಲಸ ಮಾಡುತ್ತಿವೆ, ಅಲ್ಲಿ ಏನಾಗುತ್ತಿದೆ, ಅಲ್ಲಿರತಕ್ಕ ಎಡರುತೊಡರುಗಳೇನು, ಅಲ್ಲಿರತಕ್ಕ ನ್ಯೂನತೆಗಳೇನು, ಯಾವುದು ಸಮರ್ಪಕವಾಗಿದೆ, ಯಾವುದು ಸಮರ್ಪಕವಾಗಿಲ್ಲ, ಇದನ್ನೆಲ್ಲಾ ಕೂಡ ವಿಮರ್ಶೆ ಮಾಡಬೇಕಾಗಿರತಕ್ಕಂಥದ್ದು ಅತೀ ಅವಶ್ಯಕವಾಗಿದೆ. ಅದುದರಿಂದ ಇದನ್ನು ಆಳವಾದ ಅಭ್ಯಾಸಕ್ಕೆ, ಆಳವಾದ ಚಿಂತನೆಗೆ ಗುರಿಪಡಿಸಬೇಕಾದ ಅವಶ್ಯಕತೆ ಇದೆ. ಆದುದರಿಂದ ಈ ಮಸೂದೆಯನ್ನು ಜಾಯಿಂಟ್ ಸೆಲೆಕ್ಟ್ ಸಮಿತಿಗೆ ಕಳುಹಿಸುವುದು ಸೂಕ್ತ ಎಂದು ನನಗನ್ನಿಸುತ್ತದೆ. ಆದಷ್ಟು ಜಾಗ್ರತೆಯಾಗಿ ಜಂಟಿ ಸಲಹಾ ಸಮಿತಿ ತನ್ನ ವರದಿಯನ್ನು ಕ್ಷಿಪ್ರದಲ್ಲಿ ಕೊಡತಕ್ಕಂಥ ವಿಧಿಯನ್ನು ಹಾಕಿ ಇದನ್ನು ಕಳುಹಿಸಬೇಕೆಂದು ನನ್ನ ಮನವಿ. ಬಹುಶಃ ಸರಕಾರ ಕೂಡ ಇದಕ್ಕೆ ಒಪ್ಪುತ್ತದೆ ಎಂಬುದು ನನ್ನ ಭಾವನೆ. ಏತಕ್ಕೆಂದರೆ ಒಂದು ಒಳ್ಳೆಯ ಕೆಲಸ ಮಾಡುವಾಗ ನಾವೂ ಕೂಡ ಸಹಕಾರ ಕೊಡುವ ಪರಿಸ್ಥಿತಿಯಲ್ಲಿದ್ದೇವೆ, ನಾವೂ ಕೂಡ ಸ್ವಾಗತ ಮಾಡುತ್ತೇವೆ. ಆದುದರಿಂದ ನಮ್ಮ ಸಲಹೆ ಏನಿದೆ, ಮನವಿ ಏನಿದೆ, ಇದನ್ನು ಸರಕಾರ ಮನ್ನಿಸಬೇಕೆಂದು ತಮ್ಮ ಮೂಲಕ ಸರಕಾರಕ್ಕೆ ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರಿ ಎಸ್.ಹೆಚ್.ಕೌಜಲಗಿ: (ಬೈಲಹೊಂಗಲ):- ಸನ್ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಮಾನ್ಯ ಶಿಕ್ಷಣ ಮಂತ್ರಿಗಳು ತಂದಿರತಕ್ಕಂಥ ಓಪನ್ ಯೂನಿವರ್ಸಿಟಿ ಬಿಲ್ ನಿಜವಾಗಿಯೂ ಸ್ವಾಗತಾರ್ಹ. ಏತಕ್ಕೆಂದರೆ, ಬೇರೆ ಬೇರೆ ರಾಜ್ಯಗಳಲ್ಲಿ ಇಂತಹ ಒಂದು ಯೂನಿವರ್ಸಿಟಿ ಇದ್ದು ನಮ್ಮ ಕರ್ನಾಟಕ ರಾಜ್ಯದಲ್ಲಿ ಮಾತ್ರ ಇರುವುದಿಲ್ಲ. ಆದರೆ ಈಗಾಗಲೇ ಹಿರಿಯ ಸದಸ್ಯರು ಮಾತನಾಡಿದ ಪ್ರಕಾರ ಈ ಒಂದು ಬಿಲ್‌ನ್ನು ಕೂಲಂಕುಷವಾಗಿ ವಿಚಾರ ಮಾಡುವುದು ಅತೀ ಅವಶ್ಯ ಇದೆ. ಏತಕ್ಕೆಂದರೆ ಈ ಬಿಲ್‌ನ್ನು ಇವತ್ತು ಮುಂಜಾನೆ ಕೊಟ್ಟಿದ್ದಾರೆ. 24 ತಾಸು ಟೈಮ್ ಸಹಿತ ಓದುವುದಕ್ಕೆ ಯಾರಿಗೂ ಕೊಟ್ಟಿರುವುದಿಲ್ಲ. ಇಂತಹ ಪ್ರಸಂಗದಲ್ಲಿ, ತರಾತುರಿಯಿಂದ ಪಾಸ್ ಮಾಡುವುದಕ್ಕಿಂಥ, ಇದು ಮಹತ್ವವಾದ ಬಿಲ್ ಇರುವುದರಿಂದ ಇದನ್ನು ಜಂಟಿ ಸಲಹಾ ಸಮಿತಿಗೆ ಕಳುಹಿಸಿಕೊಡಬೇಕು. ಕಳುಹಿಸಿಕೊಟ್ಟು, ನಿಧಾನವಾಗಿ ಚರ್ಚಿಸಿ ಒಳ್ಳೆಯ ರೀತಿಯಿಂದ

ಆಗುವಂತೆ ಮಾಡಬೇಕೆಂದು ನಾನು ಈ ಸಭೆಯ ಮುಖಾಂತರ ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಹೆಚ್.ಬನ್ನಿಕೋಡ್:(ಹಿರೇಕೆರೂರ್):- ಮಾನ್ಯ ಅಧ್ಯಕ್ಷರೇ, ಈ ಒಂದು ವಿಧೇಯಕವನ್ನು ತರುವಲ್ಲಿ ಶಿಕ್ಷಣ ಮಂತ್ರಿಗಳ ವಿಶೇಷ ಪ್ರಯತ್ನ ಇದೆ. ಆದರೆ ಈಗಾಗಲೇ ನಮ್ಮ ಸ್ನೇಹಿತರು ಹೇಳಿದ ಪ್ರಕಾರ ಇದೇ ದಿವಸ ಈ ಬಿಲ್ ಸದಸ್ಯರ ಕೈಗೆ ಸಿಕ್ಕಿದೆ. ಸಾರ್ವಜನಿಕರಿಗೂ ಇದರ ವಿಷಯ ಗೊತ್ತಾಗಿಲ್ಲ. ಸದನದ ಸದಸ್ಯರಿಗೂ ಇದರ ವಿಚಾರ, ಇದರಲ್ಲಿ ಅಳವಡಿಸಿರತಕ್ಕಂಥ ಕಾನೂನು, ಅದರಿಂದ ಆಗತಕ್ಕ ಅನುಕೂಲ ಪ್ರತಿಕೂಲಗಳನ್ನು ಚರ್ಚೆ ಮಾಡಬೇಕಾಗುತ್ತದೆ. ಇಲ್ಲಿ ಸಾಕಷ್ಟು ಸಮಯ ಸಿಗಲಾರದು. ಅದಕ್ಕಾಗಿ ಈ ರಾಜ್ಯದಲ್ಲಿರತಕ್ಕಂಥ ಹಿರಿಯ ಸಾಹಿತಿಗಳು, ಕಲಾವಿದರು ಮತ್ತು ಸಾರ್ವಜನಿಕರೂ ಕೂಡ ಇದರ ಬಗ್ಗೆ ತಮ್ಮ ಪಾಂಡಿತ್ಯಪೂರ್ಣವಾದ ವಿಚಾರಗಳನ್ನು ಕೊಡುವುದಕ್ಕೆ ಅವಕಾಶವಾಗುತ್ತದೆ. ಇದನ್ನು ಪ್ರಕಟಣೆ ಮೂಲಕ ಪ್ರಚುರ ಪಡಿಸಿ ಸಲಹೆ ಸೂಚನೆಗಳನ್ನು ಪಡೆಯಬಹುದು. ಇದಕ್ಕೆ ಸದನದ ಸಮಿತಿ ಮಾಡಿ ಆದಷ್ಟು ಬೇಗ ಇದರ ಬಗ್ಗೆ ತೀರ್ಮಾನ ತೆಗೆದುಕೊಂಡು ಪರಿಪೂರ್ಣ ವಾದಂಥ ಕಾನೂನನ್ನು ತರುವುದಕ್ಕೆ ಸಹಾಯವಾಗುತ್ತಗೆ, ಜಂಟಿ ಸಲಹಾ ಸಮಿತಿ ಮೂಲಕ ಇದನ್ನು ಮಾಡಬೇಕು. ಇವತ್ತು ಇರತಕ್ಕಂಥದ್ದು ಕೇವಲ ಸರಕಾರಿ ಹುದ್ದೆಗಳಿಗೆ ಮಾತ್ರ ಸೀಮಿತವಾದ ವಿದ್ಯೆ. ಅಲ್ಲಿ ಪರಿಪೂರ್ಣವಾದ ಒಂದು ಚಿಂತೆ ಹಾಗೂ ಅಲ್ಲಿ ಎಲ್ಲರಿಗೂ ಅವಕಾಶ ಸಿಗಲಾರದು. ಅನೇಕರಿಗೆ ಅಡ್ಮಿಷನ್ ಸಿಗದೆ ವಿದ್ಯೆ ಕಲಿಯುವುದಕ್ಕೆ ಅವಕಾಶ ಸಿಗುತ್ತಿಲ್ಲ. ಇರತಕ್ಕಂತ ವಿಶ್ವವಿದ್ಯಾನಿಲಯ,ಇರತಕ್ಕಂಥ ಕಾಲೇಜುಗಳಲ್ಲಿ ಮುಕ್ಕ ವಿಶ್ವವಿದ್ಯಾನಿಲಯದ ಕಾನೂನು ತರತಕ್ಕುದ್ದು ಬಹಳ ಸೂಕ್ತವಾದುದು ಎಂದು ಹೇಳಿ ಇದನ್ನು ಜಂಟಿ ಸಲಹಾ ಸಮಿತಿಗೆ ಒಪ್ಪಿಸಿದರೆ ಪರಿಪೂರ್ಣವಾದ ಕಾನೂನನ್ನು ನಾವು ಜನರಿಗೆ ಕೊಡಿಸಬಹುದು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿಸುತ್ತೇನೆ.

ಶ್ರೀ ಎನ್.ಜಿ.ನಾಯಕ್ (ಮೊಳಕಾಲ್ಮೂರು):- ಮಾನ್ಯ ಅಧ್ಯಕ್ಷರೇ, ಮಾನ್ಯ ಶಿಕ್ಷಣ ಸಚಿವರು ಈಗ ತಂದಿರತಕ್ಕಂಥ ಬಿಲ್ ಎಷ್ಟು ಚೆನ್ನಾಗಿ ಇದೆ ಎಂದರೆ ನಾನು ಹೇಳುವುದಕ್ಕೇ ಸಾಧ್ಯ ಇಲ್ಲ. ಆದರೆ ಒಂದು ವಿಷಯ ನಾನು ಹೇಳುತ್ತೇನೆ. ನಮ್ಮ ರೂಲಿಂಗ್ ಪಾರ್ಟಿಯವರು ಏನೋ ಹೇಳಿದರೆ ವಿರೋಧ ಪಕ್ಷದವರು ಇಲ್ಲ ಎಂದು ಹೇಳುತ್ತಾರೆ, ಅವರು ಇಲ್ಲ ಎಂದರೆ ನಾನು ಹೌದು ಎಂದು ಹೇಳುತ್ತೇನೆ. ನಾವು ದಕ್ಷಿಣ ಎಂದರೆ ಅವರು ಉತ್ತರ ಎಂದು ಹೇಳುತ್ತಾರೆ. ನೀವು ಅವರ ಸಲಹೆಗೆ ಮಾನ್ಯತೆ ಕೊಡಬಾರದು. ಇದಕ್ಕೆ ಕಮಿಟಿ ಏನೂ ಬೇಕಾಗಿಲ್ಲ. ಕಮಿಟಿಯಿಂದ ಇನ್ನೂ ತಡವಾಗುತ್ತದೆ, ಆದುದರಿಂದ ಕಮಿಟಿ ಏನೂ ಬೇಕಾಗಿಲ್ಲ, ಇದನ್ನು ಅಂಗೀಕರಿಸಬಹುದು ಎಂದು ಹೇಳಿ ನಾನು ಇದನ್ನು ಸ್ವಾಗತ ಮಾಡುತ್ತೇನೆ.

(ಗೊಂದಲ)

ಶ್ರೀ ಪಾಟಾಳ್ ನಾಗರಾಜ್:- ಅವರು ಏನು ವಿಷಯ ಹೇಳಿದರು ಎಂದು ಅರ್ಥ ಆಗಲಿಲ್ಲ.

ಶ್ರೀ ಎಂ.ವೀರಪ್ಪ ಮೊಯಿಲಿ:- ಸನ್ಮಾನ್ಯ ಅಧ್ಯಕ್ಷರೇ, ನಾನು ವಿಶೇಷವಾಗಿ ಅಭಿನಂದನೆಗಳನ್ನು ನಮ್ಮ ಎನ್.ಜಿ.ನಾಯಕರಿಗೆ ಸಮರ್ಪಿಸುತ್ತೇನೆ.

ಶ್ರೀ ಸಿ.ಬೈರೇಗೌಡ:- ಅವರು ಹೇಳಿದ್ದು ನಿಮಗೇನಾದರೂ ಅರ್ಥವಾಗಿದ್ದರೆ ನಮಗೂ ಸ್ವಲ್ಪ ಹೇಳಿ.

ಶ್ರೀ ಎಂ.ವೀರಪ್ಪ ಮೊಯಿಲಿ:- ನಾನು ಮಾನ್ಯ ನಾಯಕರಿಗೆ ವಿಶೇಷವಾಗಿ ಅಭಿನಂದನೆ ಸಲ್ಲಿಸುತ್ತೇನೆ. ಎರಡು ವಿಧವಾಗಿ ಅವರ ಧ್ವನಿಯನ್ನು ನಾನು ಗುರುತಿಸಿಬಿಟ್ಟಿದ್ದೇನೆ. ಒಂದು ಬರೀ ಕಿವಿಯಲ್ಲಿ, ಇನ್ನೊಂದು ಕಿವಿಯಲ್ಲಿ ಮ್ಯಾಗೋಫೋನ್ ಇಟ್ಟುಕೊಂಡು.

ಶ್ರೀ ಎಸ್.ಬಂಗಾರಪ್ಪ:- ನಿಮಗೆ ಎಂಥಾದ್ದು ಗೊತ್ತಾಯಿತು ?

ಶ್ರೀ ಬಿ.ಎಂ.ಇದಿನಬ್ಬ:- ಇದನ್ನು ಜಂಟಿ ಸಲಹಾ ಸಮಿತಿಗೆ ಕೊಡುವ ಅಗತ್ಯ ಇಲ್ಲ ಎಂದು ಅವರು ಹೇಳಿದ್ದುದು.

ಶ್ರೀ ಎಂ.ವೀರಪ್ಪ ಮೊಯಿಲಿ:- ಹೌದು ಇದನ್ನು ಜಂಟಿ ಸಲಹಾ ಸಮಿತಿಗೆ ಕೊಡುವ ಆವಶ್ಯಕತೆ ಇಲ್ಲ

ಎಂದು ಅವರು ಹೇಳಿದ್ದದು. ಸನ್ಮಾನ್ಯ ನಾಯಕರು .. ..

ಶ್ರೀ ವಾಟಾಳ್ ನಾಗರಾಜ್:- ಯಾವ ವಿಷಯ ಜಂಟಿ ಸಲಹಾ ಸಮಿತಿಗೆ ಕೊಡಬಾರದು ಎಂದು ಅವರು ಹೇಳಿದರು ಎನ್ನುವುದು ನಮಗೆ ಗೊತ್ತಾಗಲಿಲ್ಲ ಅದಕ್ಕೆ.. .. .. ..

ಛೇರ್ಮನ್:- ಶಿಕ್ಷಣ ಮಂತ್ರಿಗಳು ಹೇಳಿದ್ದು ಎಂದು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ನಮ್ಮ ಶಿಕ್ಷಣ ಮಂತ್ರಿಗಳು ಬೆಳಗ್ಗೆಯಿಂದ ಸಂಜೆವರೆಗೂ ಎಲ್ಲವನ್ನೂ ಹೇಳುತ್ತಿರುತ್ತಾರೆ.

ಛೇರ್ಮನ್:- ಈಗ ಹೇಳಿದ್ದು ಎಂದು ಅವರು ಹೇಳಿದರು.

ಶ್ರೀ ಎಂ.ವೀರಪ್ಪ ಮೊಯಿಲಿ:- ಸನ್ಮಾನ್ಯ ಎನ್.ಜಿ.ನಾಯಕರದ್ದು ಚಿತ್ರದುರ್ಗ ಜಿಲ್ಲೆ, ಗಂಡು ಮೆಟ್ಟಿದ ನೆಲ. ಚಿತ್ರದುರ್ಗದ ನಾಯಕರ ಒಂದು ಪರಂಪರೆಯಿಂದ ಬಂದಂತಹವರು ನಾಯಕರು. ಮುಕ್ತ ವಿಶ್ವವಿದ್ಯಾನಿಲಯದ ಸ್ವರೂಪ ಎಲ್ಲಾ ಅವರಿಗೆ ಗೊತ್ತಿದೆ. ಅವರು ಅಧ್ಯಯನ ಮಾಡಿ ಹೇಳಿದ್ದಾರೆ. ಏಕೆಂದರೆ ಇದು ಜಂಟಿ ಸಲಹಾ ಸಮಿತಿಗೆ ಹೋಗುವ ಅವಶ್ಯಕತೆ ಇಲ್ಲ ಎಂದು ಹೇಳಿದ್ದಾರೆ. ಕನ್ನಡ ಮುಕ್ತವಿಶ್ವವಿದ್ಯಾನಿಲಯ ಹೊಸವಿಚಾರ, ಹೊಸ ಮಸೂದೆ. ಏಕೆಂದರೆ ಬಾಕಿ ವಿಶ್ವವಿದ್ಯಾನಿಲಯಗಳಂತೆ ಇದು ಇಲ್ಲ, ಉಳಿದ ಮಸೂದೆಗಳ ರೀತಿಯಲ್ಲಿ ಇದು ಇಲ್ಲ. ಅದಕ್ಕಿಂತ ವಿಭಿನ್ನವಾಗಿದೆ. ಆದ್ದರಿಂದ ಸನ್ಮಾನ್ಯ ಹಿರಿಯ ಸದಸ್ಯರು ಏನು ಅಭಿಪ್ರಾಯ ಕೊಟ್ಟಿದ್ದಾರೆ ಅದನ್ನು ನಾವು ಸರಿಯಾಗಿ ಅಧ್ಯಯನ ಮಾಡೋಣ. ಚಿಂತನೆ ಮಾಡೋಣ. ಏಕೆಂದರೆ ಇನ್ನು ಏನಾದರೂ ಹೊಸ ಆಲೋಚನೆಗಳು ಇದ್ದರೆ ಅವನ್ನು ನಾವು ಸ್ವೀಕಾರ ಮಾಡಬೇಕಾಗುತ್ತದೆ. ಇವತ್ತು ಬೇರೆ ಬೇರೆ ವಿಷಯಗಳಿವೆ. ಕರ್ನಾಟಕ ರಾಜ್ಯಕ್ಕೆ ಸೆಕೆಂಡ್ ಚಾನಲ್ ಬರಬೇಕು ಎಂದು ಇದೆ. ಬಹಶಃ ಸೆಕೆಂಡ್ ಚಾನಲ್ ಎಂದು ಹೇಳಿದರೆ ದೂರದರ್ಶನದಲ್ಲಿ ಬರುತ್ತದೆ. ಆಗ ಬಹುಶಃ ನಾವು ಮುಕ್ತ ವಿಶ್ವವಿದ್ಯಾನಿಲಯ ಏನು ಮಾಡಿದ್ದೇವೆ ಇದು ಬಹಳ ಅತಿ ವಿಶೇಷವಾದ ಪಾತ್ರವನ್ನು ಪಡಿಸಲಿಕ್ಕೆ ಇದೆ. ಇದು ಬರೀ ಒಂದು ಸಾಮಾನ್ಯವಾದ ಡಿಗ್ರಿ ಕೊಡತಕ್ಕಂಥ ಕಾರ್ಯಗಾರ ಆಗುವುದಿಲ್ಲ. ಇದು ಇಡೀ ವ್ಯಾಪಕವಾದ ಇಡೀ ಸಮುದಾಯಕ್ಕೆ ಹೊಸ ಚೇತನವನ್ನು ಕೊಡತಕ್ಕಂಥ ಮುಕ್ತ ವಿಶ್ವವಿದ್ಯಾನಿಲಯ ಆಗಬೇಕು. ನಮ್ಮ ಉದ್ದೇಶ ಕೂಡ ಅಷ್ಟೇ. ಯಾರಿಗೂ ಸ್ಥಾನಮಾನ ಕಲ್ಪಿಸಿಕೊಡಲಿಕ್ಕೆ ಪ್ರತಿಷ್ಠೆಗೋಸ್ಕರ ಈ ವಿಶ್ವವಿದ್ಯಾನಿಲಯವನ್ನು ಕೊಡುತ್ತಿಲ್ಲ. ಇದು ಇಡೀ ಸಮುದಾಯಕ್ಕೆ ಪ್ರತಿಷ್ಠೆ, ಕರ್ನಾಟಕ ರಾಜ್ಯದ ಭಾಷೆಗೆ, ನುಡಿಗೆ, ಸಂಸ್ಕೃತಿಗೆ ವಿಶೇಷವಾಗಿ ಸಂಪನ್ನತಾ ಶಕ್ತಿಯನ್ನು ಕೊಡತಕ್ಕಂಥ ವಿಶ್ವವಿದ್ಯಾನಿಲಯ. ಆ ಉದ್ದೇಶದಿಂದ ನಾವು ಅದಕ್ಕೆ ಒಪ್ಪಿದ್ದೇವೆ. ಆದರೆ ಒಂದು ವಿನಂತಿಗೆ ತಾವು ಮನ್ನಣೆ ಕೊಡಬೇಕು. ಅದೇನೆಂದರೆ ಮೇ ತಿಂಗಳ ಪ್ರಥಮ ವಾರದಲ್ಲಿ ಬಹುಶಃ ನಾವು ಅಧಿವೇಶನ ಕರೆಯುತ್ತೇವೆ. ಆಗ ಇದನ್ನು ಪಾಸ್ ಮಾಡಿಕೊಡತಕ್ಕಂಥಾದ್ದು. ಒಂದೇ ತಿಂಗಳಲ್ಲಿ ನಾವು ಸಾಕಷ್ಟು ಸಿಟಿಂಗ್ಸ್ ಮಾಡಿ ವರದಿಯನ್ನು ಕೊಡತಕ್ಕಂಥಾದ್ದನ್ನು ಮಾಡಿದರೆ ನಾವು ಬರುವ ಶೈಕ್ಷಣಿಕ ವರ್ಷದಿಂದ ಈ ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್:- ನಾವು ಈಗಲೇ ಸ್ವಾಗತ ಮಾಡಿದ್ದೇವೆ. ಆಗ ನಾವು ಒಪ್ಪಿಗೆ ಕೊಡುವುದಕ್ಕೆ ತಯಾರಾಗಿದ್ದೇವೆ. ಅದರಲ್ಲಿ ಏನೂ ಅನುಮಾನ ಬೇಕಾಗಿಲ್ಲ, ಮಾಡೋಣ.

ಶ್ರೀ ಬಿ.ಎಚ್.ಬನ್ನಿಕೋಡ್:- 12 ಮೀಟಿಂಗ್ ಮಾಡಿ ವಿಚಾರ ಮಾಡಿ ಮಾಡಬಹುದು.

ಶ್ರೀ ಎಂ.ವೀರಪ್ಪ ಮೊಯಿಲಿ :- ಹಾಗಾದರೆ ನಿಮ್ಮ ಸೂಚನೆಗೆ ನಾನು ಒಪ್ಪಿದ್ದೇನೆ. ಸನ್ಮಾನ್ಯ ನಾಯಕರ ಸೂಚನೆಯನ್ನು ಒಪ್ಪಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:- ಯಾವ ಸಮಿತಿ ಎಂದು ಅವರಿಗೆ ಅರ್ಥವಾಗಿಲ್ಲ

ಛೇರ್ಮನ್:- ಪೂರ್ತಿಯಾಗಿ ಅರ್ಥ ಮಾಡಿಕೊಂಡೆ ಮಾತನಾಡಿದ್ದಾರೆ.

ಶ್ರೀ ಎಂ.ವೀರಪ್ಪ ಮೊಯಿಲಿ:- ಹೌದು ಪೂರ್ತಿ ಅರ್ಥಮಾಡಿಕೊಂಡೇ ಮಾತನಾಡಿದ್ದಾರೆ.

ಶ್ರೀ ಎನ್.ಜಿ.ನಾಯಕ್:- ಅದಕ್ಕೆ ಅವರು 5-6 ಜನರ ಒಂದು ಕಮಿಟಿ ಮಾಡಬೇಕೆಂದು ಹೇಳುತ್ತಿದ್ದಾರೆ. ಡಿಲೇ ಆಗುತ್ತದೆ. ಡಿಲೇ ಬಹಳ ಡೇಂಜರಸ್. ಅದಕ್ಕೆ ನಾನು ಹೇಳುವುದು ಏನೆಂದರೆ, ಈಗ ಪಾಸ್ ಮಾಡಿದರೆ ಒಳ್ಳೆಯದು. ಇದರಿಂದ ಎಷ್ಟೋ ಜನಗಳಿಗೆ ಅನುಕೂಲವಾಗುತ್ತದೆ. ತಾವು ಮಾಡಿರತಕ್ಕಂಥ ಸಲಹೆಗಳನ್ನು ನಾನು ನೋಡಿದ್ದೇನೆ, ನಾನು ಕೇಳಿದ್ದೇನೆ. ಯಾವ ಮಿನಿಸ್ಟರ್ ಇದುವರೆಗೂ ಮಾಡಿಲ್ಲ.

ಶ್ರೀ ಎಂ.ವೀರಪ್ಪ ಮೊಯಿಲಿ:- ಸನ್ಮಾನ್ಯ ನಾಯಕರ ಪ್ರಸ್ತಾಪದ ಹಿಂದೆ ಇರತಕ್ಕಂಥ ಕಳಕಳಿಯನ್ನು ನಾವು ಅರ್ಥಮಾಡಿಕೊಳ್ಳಬೇಕು. ಅವರು ಏನು ಹೇಳಿದ್ದಾರೆ ಅದಕ್ಕೆ ನಾನು ಹೇಳಿದೆ. ನಾನು ಒಂದು ತಿಂಗಳು ಎಂದು ಏಕೆ ಹೇಳಿದೆ ಎಂದರೆ, ನಾಯಕರ ಸೂಚನೆಯನ್ನು ಅಂಗೀಕಾರ ಮಾಡಿ ಒಂದು ತಿಂಗಳು ಎಂದು ಹೇಳಿದೆ. ಅವರು ತಡವಾಗುತ್ತದೆ ಎಂದು ಹೇಳಿದ್ದಾರೆ. ಹೌದು, ಇದು ತಡವಾಗಬಹುದು ಅದಕ್ಕೆ ಒಂದು ತಿಂಗಳಲ್ಲಿ ವರದಿ ಕೊಡಬೇಕು ಎಂದು ಹೇಳಿದರೆ ಸನ್ಮಾನ್ಯ ನಾಯಕರ ಸೂಚನೆಯನ್ನೂ ಕೂಡ ಮಾಡಿದಂತೆ ಆಗುತ್ತದೆ. ಅವರಿಗೂ ಬೇಸರ ಇಲ್ಲ ನಿಮಗೂ ಬೇಸರ ಇಲ್ಲ. ಜಂಟಿ ಸಲಹಾ ಸಮಿತಿಗೆ, ತಮ ಕಡೆಯಿಂದ ಹೆಸರುಗಳು ಬಂದರೆ ನಾಳೆ ನಾವು ಸೂಚನೆಯನ್ನು ಕೊಡುತ್ತೇವೆ. ನಾಳೆ ನಾವು ಸೂಚನೆಯನ್ನು ಕೊಟ್ಟಾಗ ನಾಳೆ ಅಂಗೀಕಾರ ಮಾಡಬಹುದು.

ಛೇರ್ಮನ್:- ಈಗ ಕಂದಾಯ ಮಂತ್ರಿಗಳು ಇಲ್ಲ. ಇನಾಂ ರದ್ದಿಯಾತಿ ವಿಧೇಯಕ ತಿದ್ದುಪಡಿ ಮಂಡಿಸಬೇಕು.

(iii) ಮೈಸೂರು ವೈಯಕ್ತಿಕ ಮತ್ತು ಸಂಕೀರ್ಣ ಇನಾಮುಗಳ ರದ್ದಿಯಾತಿ (ತಿದ್ದುಪಡಿ) ವಿಧೇಯಕ 1992.

(ಪರ್ಯಾಲೋಚನಾ ಪ್ರಸ್ತಾವ)

ಶ್ರೀ ಎಂ.ವೀರಪ್ಪ ಮೊಯಿಲಿ :(ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೇ, ಕಂದಾಯ ಸಚಿವರ ಪರವಾಗಿ 1992ರ ಮೈಸೂರು ವೈಯಕ್ತಿಕ ಮತ್ತು ಸಂಕೀರ್ಣ ಇನಾಮುಗಳ ರದ್ದಿಯಾತಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

(ಪ್ರಸ್ತಾವ ಮಂಡಿಸಲಾಯಿತು)

ಶ್ರೀ ಎಂ.ವೀರಪ್ಪ ಮೊಯಿಲಿ:- (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಸನ್ಮಾನ್ಯ ಅಧ್ಯಕ್ಷರೆ, The Mysore (Personal and Miscellaneous) Inams Abolition Acts, 1954 ರಿಂದ ಜಾರಿಯಲ್ಲಿದೆ. ಅದಕ್ಕೆ ನಾವು ಈ ಒಂದು ತಿದ್ದುಪಡಿಯನ್ನು ಸೂಚನೆ ಮಾಡಿದ್ದೇವೆ. ಆರ್ಟಿಕಲ್ 31 (ಸಿ) ಪ್ರಕಾರ ಇದರ ಉದ್ದೇಶದ ಬಗ್ಗೆ ನಾವು ಸ್ಪಷ್ಟೀಕರಣ ಕೊಟ್ಟಿದ್ದೇವೆ. ಏನೆಂದರೆ ಈ ತಿದ್ದುಪಡಿಯನ್ನು ತರದೇ ಇದ್ದರೆ, ಸಾವಿರಾರು ಎಕರೆ ಫಲವತ್ತಾದ ಜಮೀನು ಹಾಗೂ ಅರಣ್ಯ ಸಂಪತ್ತು ಏನು ಇದೆ ಅದು ನಾಶವಾಗಿ ಹೋಗುತ್ತದೆ. ಅಂಥಾ ಅರಣ್ಯ ಸಂಪತ್ತನ್ನು ನಾವು ಇವತ್ತು ಕಾಯ್ದಿಡಬೇಕಾಗುತ್ತದೆ, ಉಳಿಸಿಕೊಳ್ಳಬೇಕಾಗುತದೆ. ಏಕೆಂದರೆ, ಇದರ ಬಗ್ಗೆ ಏನು ಒಂದು ಹಕ್ಕನ್ನು ರದ್ದುಗೊಳಿಸಲಿಕ್ಕೆ, ಏನು ಈ ತಿದ್ದುಪಡಿ ಮಾಡಿದ್ದೇವೆ, ಇದರ ಬಗ್ಗೆ ಸುಪ್ರೀಮ್ ಕೋರ್ಟಿನಲ್ಲಿ ಕೇಸ್ ಹೋಗಿ ಇಲ್ಲಿ ಬಂದಿತ್ತು.

ಶ್ರೀ ಸಿ.ಬೈರೇಗೌಡ:- ಅದು ಏನು ನಷ್ಟವಾಗುತ್ತಿದೆ ಎನ್ನುವ ವಿವರವನ್ನು ಹೇಳಬೇಕು. ಏಕೆಂದರೆ, ಆನಂದಪುರ ಅಥವಾ ಸಾಗರ ತಾಲ್ಲೂಕಿಗೆ ಸಂಬಂಧಪಟ್ಟಂತೆ ಇರತಕ್ಕಂಥಾದ್ದು. ಅದು ನಮಗೆ ದೂರ ಇರುವುದರಿಂದ ನಾವು ಒಪ್ಪಿಗೆ ಕೊಡುವಾಗ ಸರಿಯಾಗಿ ತಿಳಿದು ಒಪ್ಪಿಗೆ ಕೊಡತಕ್ಕಂಥಾದ್ದು ಸೂಕ್ತ. ನಮಗೆ ಅಷ್ಟು ಮಾಹಿತಿ ಇಲ್ಲ. ದಯವಿಟ್ಟು ಅದರ ಬಗ್ಗೆ ವಿವರವಾದ ಮಾಹಿತಿಯನ್ನು ಕೊಟ್ಟರೆ ಒಳ್ಳೆಯದು.

+ ಶ್ರೀ ಎಸ್.ಬಂಗಾರಪ್ಪ: (ಮುಖ್ಯಮಂತ್ರಿಗಳು):- ಮಾನ್ಯ ಸಭಾಧ್ಯಕ್ಷರೆ, ಇದು ಗೌತಮಪುರ ಎನ್ನತಕ್ಕಂಥ ಒಂದು ವಿಲೇಜ್. in Sagar Taluka. This matter comes under 1954 Personal & Miscellaneous Inams Abolition Act. This was given effect